<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ</u>

**ಓ.ಎಸ್.ಃ14 /2010**
**ಪಿ.ಡಬ್ಲ್ಯೂ.5**

**ದಿನಾಂಕಃ 16-12-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

<u>ಮುಖ್ಯವಿಚಾರಣೆಃ ವಾದಿಯ ಪರ ವಕೀಲರಾದ ಶ್ರೀ.ಬಿ.ಎನ್.ಆರ್ ರವರಿಂದ</u>

**ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ನಮೂದಿಸಿರುವ ಎಲ್ಲಾ ಸಂಗತಿಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿದ್ದು ನಾನು ಅದಕ್ಕೆ ನನ್ನ ಸಹಿ ಮಾಡಿರುತ್ತೇನೆ.**

**ಸಾಕ್ಷಿಯು ತಮ್ಮ ತಂದೆಯ ಸಹಿಯನ್ನು ನೋಡಿ ಗುರುತಿಸಲಾಗಿದ್ದು, ಅದನ್ನು ನಿಪಿ.30ಸಿ ಎಂದು ಗುರುತಿಸಲಾಯಿತು.**

**ಪಾಟೀಸವಾಲುಃ 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್.ಎ ರವರಿಂದಃ**

**ಈ ದಾವೆಯನ್ನು ವಾದಿಯು 1ನೇ ಪ್ರತಿವಾದಿಯ ವಿರುದ್ದ ಹಾಕಿರುತ್ತಾರೆ. ವಾದಿಗಳ ತಂದೆ ಬದುಕಿದ್ದಾರೆ. ವಾದಿಗಳ ಮತ್ತು ಅವರ ತಂದೆ ವಿಭಾಗ ಮಾಡಿಕೊಂಡಿದ್ದಾರೆ, ಆದರೆ ವಿಭಾಗ ಮಾಡಿಕೊಂಡು ಎಷ್ಟು ವರ್ಷಗಳಾಗಿದೆ ಎಂದರೆ ಗೊತ್ತಿಲ್ಲ. ಸದರಿ ವಿಭಾಗದ ಬಗ್ಗೆ ದಾಖಲೆ ಬರೆದಿರುವ ಕುರಿತು ನನಗೆ ಗೊತ್ತಿಲ್ಲ. ಸದರಿ ವಿಭಾಗದ ಮೂಲಕ 1ನೇ ವಾದಿಗೆ ದಾವಾ ಸ್ವತ್ತು ಬಂದಿರುತ್ತದೆ. ಸದರಿ ವಿಭಾಗದ ಮೂಲಕ 2ನೇ ವಾದಿ ಮತ್ತು ಅವರ ತಂದೆಗೆ ಯಾವ ಸ್ವತ್ತುಗಳು ಬಂದಿವೆ ಎಂದು ನನಗೆ ಗೊತ್ತಿಲ್ಲ. 1ನೇ ವಾದಿಯು ದಾವಾ ಸ್ವತ್ತು ತಮಗೆ ವಿಭಾಗದ ಮೂಲಕ ಬಂದಿರುವುದಾಗಿ ತಿಳಿಸಿರುತ್ತಾರೆ.**

**ದಾವಾ ಸ್ವತ್ತಿನ ಪೂರ್ವಕ್ಕೆ ಹೊಂದಿಕೊಂಡಂತೆ ನನ್ನ ಜಮೀನು ಇರುತ್ತದೆ ಅದರ ಸರ್ವೆ ನಂ.60/2, 7 ಗುಂಟೆ ಇರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಕೆರೆ ಅಂಗಳ, ಉತ್ತರಕ್ಕೆ ಬಚ್ಚಣ್ಣನವರ ಜಮೀನು, ದಕ್ಷಿಣಕ್ಕೆ ವಾದಿಗಳ ಜಮೀನು ಇರುತ್ತದೆ, ದಕ್ಷಿಣಕ್ಕಿರು ಜಮೀನಿನ**

ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ. ದಾವಾ ಸ್ವತ್ತು ಪಹಣಿಗಳಲ್ಲಿ ವಾದಿಗಳ ತಂದೆಯ ಹೆಸರಿನಲ್ಲಿ ಬಂದಿರುತ್ತದೆ.

ವಾದಿಗಳ ತಂದೆ ಮತ್ತು 1ನೇ ಪ್ರತಿವಾದಿಯ ನಡುವಿನ ಪತ್ರ ವ್ಯವಹಾರಕ್ಕೆ ನನ್ನ ತಂದೆ ಸಹಿ ಮಾಡಿದ್ದಾರೆಂದು ಗೊತ್ತು, ಆದರೆ ದಾಖಲೆಯಲ್ಲಿ ನೋಡಿಲ್ಲ ಮತ್ತು ಅದರಲ್ಲಿನ ವಿಚಾರಗಳು ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿದ್ದೆಂದು ನನಗೆ ಗೊತ್ತಿಲ್ಲ. ನನ್ನ ತಂದೆ ಸಹಿ ಇರುವ ಬೇರೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ತಂದೆ 4ನೇ ತರಗತಿ ಓದಿದ್ದಾರೆ. ನಿಪಿ.30ರಲ್ಲಿರುವ ಸಾಕ್ಷಿಯ ಸಹಿ ನನ್ನ ತಂದೆಯದಲ್ಲ ಎಂದರೆ ಸರಿ ಅಲ್ಲ. ವಾದಿಗಳ ತಂದೆ ಮತ್ತು 1ನೇ ಪ್ರತಿವಾದಿಯ ನಡುವೆ ಯಾವುದೇ ಪತ್ರ ವ್ಯವಹಾರ ಆಗಿಲ್ಲ ಎಂಂದರೆ ಸರಿ ಅಲ್ಲ.

2ನೇ ಪ್ರತಿವಾದಿ ನನಗೆ ಗೊತ್ತು. ವಾದಿಗಳು ಮತ್ತು 2ನೇ ಪ್ರತಿವಾದಿಯ ನಡುವೆ ತಕರಾರಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಾಗಲೀ ಅವರ ತಂದೆಗಾಗಲೀ ಯಾವುದೇ ಹಕ್ಕು ಸ್ವಾದೀನ ಇಲ್ಲ ಎಂದರೆ ಸರಿ ಅಲ್ಲ. 1ನೇ ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದಾರೆ ಎಂದರೆ ಸರಿ ಅಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ 1ನೇ ಪ್ರತಿವಾದಿಯೇ ಸ್ವಾದೀನದಲ್ಲಿದ್ದಾರೆಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ರೋಹಿಣಿ. ಡಿ)
ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ
ಶಿಡ್ಲಘಟ್ಟ.